Sri S. S. SHETTAR.—May I know whether you have made discrimination while promoting them and in respect of non-teaching Hindi staff, promotion is held up ?

Sri K. V. SHANKARA GOWDA.—It is not held up.

Mr. DEPUTY SPEAKER.—Question Hour is over. Now Call Attention Notice.

CALL ATTENTION NOTICE TO A MATTER OF URGENT PUBLIC IMPORTANCE

Sri B. B. SAYANAK(Belgaum).—I call attention of the Minister for Health and Housing to the death occurred in Sambre in Belgaum Taluk due to small-pox.

†Sri K. PUTTASWAMY.—The infection of small-pox occurred in Sambre village on 12th January 1968 (Belgaum Taluk) with six attacks. So far, there have been 12 attacks and 3 deaths as reported by the District Health and Family Planning Officer, Belgaum. The population of the village is 4,546. Prompt investigation has been done and immediate action has been taken to control the infection. So far 2,893 vaccinations have been done in the village. In addition brisk vaccination programme has been taken up in all the neighbouring villages. The infection is under control now.

Members' Representations

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಕಳೆದ ಎರಡು ದಿವಸಗಳಿಂದಲೂ ಕೂಡ ಈ ಸಭೆಯಲ್ಲಿ ಈ ದೇಶದ ಮುಖ್ಯಮಂತ್ರಿಗಳು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಒಪ್ಪಿ ಎರಡು ಹುದ್ದೆಗಳನ್ನು ಈ ಸರ್ಕಾರದ ಮುಖ್ಯಮಂತ್ರಿಗಳು ಹೊಂದಿರುವುದರಿಂದ ಅಧಿಕಾರದ ದುರುಪಯೋಗ ಎಷ್ಟರಮಟ್ಟಿಗೆ ಆಗಿದೆ ಎಂಬ ವಿಚಾರವನ್ನು ಸದಸ್ಯರು ತಿಳಿಸಿದ್ದಾರೆ. ನಿನ್ನೆ ಮೊನ್ನೆ ಈ ಎರಡು ದಿವಸದಿಂದ ಚರ್ಚೆ ಈ ಮಹತ್ವದ ಪ್ರಶ್ನೆಯ ಮೇಲೆ ನಡೆದಿದೆ. ನಿನ್ನೆ ಮಾನ್ಯ ಮುಖ್ಯ ಮುಂತ್ರಿಗಳು ಈ ವಿಷಯದ ಬಗ್ಗೆ ತಮ್ಮ ನಿಲುವು ಏನೆಂಬುದನ್ನು ಕೂಡ ಈ ಸಭೆಯ ಮುಂದೆ ಹೇಳಿದ್ದಾರೆ. ಅವರ ಹೇಳಿಕೆ ನಮಗೆ ಎಳ್ಳಷ್ಟೂ ಕೂಡ ಸಮಾಧಾನಕರವಾಗಿಲ್ಲ ಎಂಬುದನ್ನು ತಮ್ಮ ಮುಂದೆ ಪುನಃ ಸ್ಪಷ್ಟಪಡಿಸುತ್ತೇನೆ. ಮತ್ತು ಈ ಅಧಿಕಾರದ ದುರುಪಯೋಗ ಇದೇ ರೀತಿ ಮುಂದುವರಿದರೆ ನಾವು ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಈ ಸಭೆಯವರು ಮಾಡದೇ ಇದ್ದರೂ ಕೂಡ—ಮುಂದೆ ಅವರು ಈ ಎರಡು ಸ್ಥಾನದ ಪೈಕಿ ಒಂದನ್ನು ಅಲಂಕರಿಸದೆ ಎರಡರಲ್ಲೂ ಮುಂದುವರಿದರೆ ಈ ಹೋರಾಟ ಮುಂದುವರಿಯುತ್ತದೆ ಮತ್ತು ಯಾವ ಯಾವ ಹಂತದಲ್ಲಿ ಯಾವಾಗ ಯಾವರೀತಿ ನಡೆಯಬೇಕೆಂಬುದನ್ನು ಕೂಡ ವಿಚಾರ ಮಾಡಿದ್ದೇವೆ, ಆ ಕಾರ್ಯಕ್ರಮ ಇದೆ. ಈ ಹೋರಾಟವನ್ನು ಮುಂದುವರಿಸುತ್ತೇವೆ. ಇದನ್ನು ಯಾವಾಗ ಸಾಧನೆ ಮಾಡುತ್ತೇವೆಯೋ ಅಲ್ಲಿಯವರೆಗೂ ಹೋರಾಟವನ್ನು ಮುಂದುವರಿಸುತ್ತೇವೆ. ಈ ಶಾಸನಸಭೆ ಮುಗಿಯುವುದರೊಳಗೆ ಮುಖ್ಯಮಂತ್ರಿಗಳವರು ತಮ್ಮ ನಿಲುವನ್ನು ಸ್ಪಷ್ಟ ಮಾಡಿದರೆ ದೇಶಕ್ಕೂ ಒಳ್ಳೆಯದು, ಅವರಿಗೂ ಒಳ್ಳೆಯದು ಎಂಬ ಒಂದು ಎಚ್ಚರಿಕೆಯನ್ನು ಅವರಿಗೆ ಕೊಟ್ಟು ಮುಂದೆ ದೇಶದಲ್ಲಿ ಆಗಾಧವಾದ ಸಮಸ್ಯೆಗಳು ಇರುವ ಕಾರಣದಿಂದ ಈ ಎರಡು ದಿವಸದಿಂದ ನಡೆದಿರತಕ್ಕ ಚರ್ಚೆಯನ್ನು ತಾತ್ಕಾಲಿಕವಾಗಿ ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ಶಾಸನ ಸಭೆ ಮುಗಿಯುವುದರೊಳಗೆ ಅವರ ತೀರ್ಮಾನವನ್ನು ನಿರೀಕ್ಷಣೆ ಮಾಡಿ, ಅವರು ಏನು ನಿಲುವನ್ನು ತೆಗೆದುಕೊಳ್ಳುತ್ತಾರೋ ಅವರ ಮೇಲೆ ನಮ್ಮ ಹೋರಾಟ ನಿಂತಿದೆ ಎಂಬ ಎಚ್ಚರಿಕೆಯನ್ನು ಕೊಟ್ಟು ಈ ಚರ್ಚೆಯನ್ನು ನಿಲ್ಲಿಸುತ್ತೇನೆ.